**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ** :– ಮಾನ್ಯ ಅಧ್ಯಕ್ಷರೆ, ಅದಕ್ಕೆ ಮುಂಚೆ, ಈಗ 24 . . . .

**ಶ್ರೀ ಎಂ.ಪಿ. ಪ್ರಕಾಶ್** :– ತಾವು ಸಮಯವನ್ನು ನಿಗದಿ ಮಾಡಿದ್ದೀರಿ. ಆ ಸಮಯ ನಿಗದಿ ಪ್ರಕಾರ, ತಾವು 15 ನಿಮಿಷ ಎಂದು ಹೇಳಿ ಹೇಳುವುದಕ್ಕಿಂತ, ನಮ್ಮ ಪಕ್ಷದಿಂದ ಬಹಳ ಜನ ಮಾತನಾಡಿಲ್ಲ. ಆದ್ದರಿಂದ, ನಮಗೆ ಇಟ್ಟಿರುತಕ್ಕಂಥ ಸಮಯ ಮತ್ತು ಅವರಿಗೆ ಕೊಟ್ಟಿರುವಂಥ ಸಮಯ ಈ ಲೆಕ್ಕಾಚಾರದ ಮೇಲೆ ತಾವು ನಿಗದಿಪಡಿಸಿ. ಅದರ ಪ್ರಕಾರ ಮಾತನಾಡಲಿಕ್ಕೆ ತಾವು ತಯಾರಿದ್ದೇವೆ.

**ಅಧ್ಯಕ್ಷರು** :– ಆಯಿತು.

**ಆ) ಬೆಂಗಳೂರಿನ ಜೋಗುಪಾಳ್ಯದಲ್ಲಿ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶ ನೀಡದಿರುವ ಬಗ್ಗೆ.**

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ)** :– ಮಾನ್ಯ ಅಧ್ಯಕ್ಷರೆ, ಅದಕ್ಕೆ ಮುಂಚೆ, 24 ಜನ ವಿದ್ಯಾರ್ಥಿಗಳಿಗೆ ಜೋಗುಪಾಳ್ಯದಲ್ಲಿ ನಿನ್ನೆ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಕುಳಿತುಕೊಳ್ಳಲು ಬಿಟ್ಟಿಲ್ಲ. ಹಾಲ್‌ಟಿಕೆಟ್ಟೇ ಬಂದಿಲ್ಲವಂತೆ. ಇವತ್ತೂ ಸಹ ಬೆಳಿಗ್ಗೆ ಏನಾಗಿದೆ ಎಂದು ಗೊತ್ತಿಲ್ಲ. ಅದಕ್ಕೋಸ್ಕರ . . .

**ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ** :– ಹೆಗ್ಡೆಯವರು ಹೇಳಿದಹಾಗೆ, ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ** :– ಸರ್ಕಾರ ಉತ್ತರ ಹೇಳಲಿ.

**ಶ್ರೀ ಅಂಜನಮೂರ್ತಿ** :– ಮಾನ್ಯ ಶಿಕ್ಷಣ ಮಂತ್ರಿಗಳಾದ ಹೊರಟ್ಟಿಯವರು ಹೇಳಲಿ.

**ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ** :– ನಾವಲ್ಲ–ರೀ ಮಂತ್ರಿಗಳು. ನಾವು ಅವರ ಪರವಾಗಿಯೇ ಇದ್ದೇವೆ.

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ** :– ಸರ್ಕಾರದಿಂದ ಉತ್ತರವೇನು ಬೇಕೆಂದರೆ, ನಿನ್ನೆ ದಿವಸ 24 ಮಂದಿ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಕುಳಿತುಕೊಳ್ಳಲಿಕ್ಕಾಗಲಿಲ್ಲ. ಆದ್ದರಿಂದ ಅವರಿಗೆ ಮರುಪರೀಕ್ಷೆ ಮಾಡುತ್ತಾರಾ ಎಂಬುದನ್ನು ತಿಳಿಸಬೇಕಾಗಿದೆ. ಯಾವ ಅಧಿಕಾರಿ ಹಾಲ್‌ಟಿಕೆಟ್ ಕೊಟ್ಟಿಲ್ಲ, ಅವರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ಈ ಸದನಕ್ಕೆ ಹೇಳಬೇಕು.

**ಅಧ್ಯಕ್ಷರು** :– ಈಗ ಮಂತ್ರಿಮಂಡಲದ ಪರವಾಗಿ ಹೇಳಿ.

**ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಮಂತ್ರಿಗಳು)** :– ಹೆಗ್ಡೆಯವರೇನು ವಿಷಯ ಪ್ರಸ್ತಾಪಿಸಿದ್ದಾರೆ, ಅದರ ಬಗ್ಗೆ ತಕ್ಷಣವೇ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ತಕ್ಷಣ ಅದಕ್ಕೇನು ಕ್ರಮ ಕೈಗೊಳ್ಳಬೇಕೆನ್ನುವಂಥದ್ದು ಮಾಡಿ . . . .

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ** :– ರೀ–ಎಗ್ಜಾಮ್ ಬಗ್ಗೆ . . . .

**ಶ್ರೀ ಜಗದೀಶ್ ಶೆಟ್ಟರ್** :– ಅಧಿಕಾರಿಗಳ ಕಡೆಯಿಂದ ಒಂದು ವರದಿ ತರಿಸಿಕೊಂಡು ಏನು ರೀ–ಎಗ್ಜಾಮ್ ತೆಗೆದುಕೊಳ್ಳಲಿಕ್ಕೆ ಸಾಧ್ಯವಿದೆಯೋ ಅಥವಾ ಏನು ಮಾಡಲಿಕ್ಕೆ ಸಾಧ್ಯವಿದೆ, ಪರಿಹಾರ ಸಿಗಲಿಕ್ಕೆ ಏನು ಸಾಧ್ಯವಿದೆ ಅದನ್ನು ನಾನು ಮಾಡುತ್ತೇನೆ.

**ಶ್ರೀ ಕೆ.ಎಂ. ಕೃಷ್ಣಮೂರ್ತಿ :–** ಸಚಿವರು ಈಗ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಇದರ ಜೊತೆಗೆ ನನ್ನ ಕ್ಷೇತ್ರದವರೇ ಇಬ್ಬರಿಗೆ ಆ ತರಹವಾಗಿದೆ. ಕಡೂರು ವಿಧಾನ ಸಭಾ ಕ್ಷೇತ್ರದಲ್ಲಿ ಇಬ್ಬರು ಮಕ್ಕಳಿಗೆ ಪರೀಕ್ಷೆಗೆ ಕುಳಿತುಕೊಳ್ಳಲು ಆಗಿಲ್ಲ. ಅದಕ್ಕೆ ಈ ಹಿಂದೆ ಅಧಿಕಾರಿಗಳು ತಪ್ಪು ಮಾಡಿದ್ದಾರಲ್ಲಾ, ಅಂಥವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಬೇಕಲ್ಲಾ ?. . . .

**ಅಧ್ಯಕ್ಷರು :–** ಈಗ ಕೃಷ್ಣಮೂರ್ತಿಯವರೆ, ಎನ್‌ಕ್ವಯರಿ ಮಾಡುತ್ತೇವೆ ಎಂದು ಬಹಳ ಹಿಂದೆ ಹೇಳುತ್ತಿದ್ದರು. ಆ ತರಹ ನಾಟಕದ ತರಹ ಆಗಿದೆ. ಎನ್‌ಕ್ವಯರಿಯಾದ ಮೇಲೆ ಯಾರ ಮೇಲೂ ಆಕ್ಷನ್ ತೆಗೆದುಕೊಂಡಿಲ್ಲ(ಗೊಂದಲ) ಇದೇನು ? ಆ ಕಾರಣದಿಂದ ಅದು ಯಾರಿಗೂ ಅರ್ಥವಾಗುವುದಿಲ್ಲ. ಈ ಕಡೆ ಇದ್ದಾಗ ಒಂದು ತರಹ ಮಾತನಾಡುವುದು, ಆ ಕಡೆ ಹೋದಾಗ ಇನ್ನೊಂದು ತರಹ ಮಾತನಾಡುವುದು. ಅಂತೂ ಇಂತು ಏನೆಂದರೆ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ ಅಂದ ಹಾಗೆ ಜನರು . . . .

**ಶ್ರೀ ಕೆ.ಎಂ. ಕೃಷ್ಣಮೂರ್ತಿ :–** ಅದಕ್ಕೆ ಆ ಕಡೆಯಿಂದ ಈ ಕಡೆ ಮಾತನಾಡಿದರೆ, ಈ ಕಡೆಯಿಂದ ಆ ಕಡೆ ಮಾತನಾಡಿದರೆ . . . .

**(ಗೊಂದಲ)**

**ಅಧ್ಯಕ್ಷರು :–** ದಯಮಾಡಿ, ಶ್ರೀನಿವಾಸಗೌಡರೆ, ಮಾತನಾಡಿ.

**ಶ್ರೀ ಕೆ.ಎಂ. ಕೃಷ್ಣಮೂರ್ತಿ:–** ಯಾರು 23 ಜನರಿಗೆ ಹಾಲ್‌ಟಿಕೆಟ್ ಕಳುಹಿಸಿಲ್ಲ . . . .

**ಅಧ್ಯಕ್ಷರು :–** ಆಯಿತು, ಅದರ ಬಗ್ಗೆ ಅವರು ಹೇಳಿದ್ದಾರೆ.

**ಶ್ರೀ ಕೆ.ಎಂ. ಕೃಷ್ಣಮೂರ್ತಿ :–** ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

**ಅಧ್ಯಕ್ಷರು :–** ಮಾನ್ಯ ಮಂತ್ರಿಗಳು ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ಗೌಡರೆ, ನೀವು 15 ನಿಮಿಷದಲ್ಲಿ ಮುಗಿಸಬೇಕು.

**5) ಘನತೆವೆತ್ತ ರಾಷ್ಟ್ರಪತಿಯವರು ದಿ : 20.11.05 ರಂದು ವಿಧಾನ ಮಂಡಲದ ಉಭಯ ಸದನಗಳ ಸದಸ್ಯರುಗಳನ್ನು ಉದ್ದೇಶಿಸಿ ಮಾಡಿದ ಭಾಷಣದ ಮೇಲೆ ಮುಂದುವರೆದ ಚರ್ಚೆ ಹಾಗೂ ಸರ್ಕಾರದ ಪ್ರತಿಕ್ರಿಯೆ.**

**ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) :–** ಮಾನ್ಯ ಅಧ್ಯಕ್ಷರೆ, ಕರ್ನಾಟಕದ 50 ವರ್ಷಗಳ ಸಂದರ್ಭದಲ್ಲಿ ನಮ್ಮ ರಾಷ್ಟ್ರದ ಘನತೆವೆತ್ತ ರಾಷ್ಟ್ರಪತಿಗಳಾದಂಥ ಡಾ। ಎಪಿಜೆ ಅಬ್ದುಲ್ ಕಲಾಂರವರು ಮಾಡಿದ ಭಾಷಣದ ಬಗ್ಗೆ ಒಬ್ಬೊಬ್ಬರದ್ದು ಒಂದೊಂದು ಚಿಂತನೆ ಇರುತ್ತದೆ. ನಿನ್ನೆ ಮಾತನಾಡಿದಂಥ ಶ್ರೀ ಮಾಧುಸ್ವಾಮಿಯವರ ಕೆಲವು ಜಿಜ್ಞಾಸೆಗಳು, ಮಾನ್ಯ ವಾಟಾಳ್ ನಾಗರಾಜ್‌ರವರು ಕರ್ನಾಟಕ ಎಂದು ಹೇಳಿದರೆ, ಕೇವಲ ಕನ್ನಡದಲ್ಲೇ ಎಲ್ಲವನ್ನೂ ನಡೆಸಬೇಕೆನ್ನುವಂಥದ್ದು, ಕನ್ನಡಕ್ಕೋಸ್ಕರ ದುಡಿದಂಥವರು, ಇಂಥವರೆಲ್ಲಾ ಇದ್ದರು ಎಂದು ಹೇಳುವಂಥ ಅವರಿಬ್ಬರ ಮಾತುಗಳನ್ನು ನಾನು ಆಲಿಸಿದ್ದೇನೆ ಯಾವುದೇ ಭಾಷೆ ಅಥವಾ ಯಾವುದೇ ರಾಜ್ಯ ಅಥವಾ ಯಾವುದೇ ದೇಶ ಪ್ರಗತಿಯಾಗಬೇಕಾದರೆ ಅದರ ಅಭಿವೃದ್ಧಿ ಬಹಳ ಮುಖ್ಯ ನನಗೊಂದು ಜ್ಞಾಪಕ ಬರುತ್ತದೆ. ಆಂಧ್ರದಲ್ಲಿ, ಮಾನ್ಯ ಎನ್‌ಟಿರಾಮರಾವ್‌ರವರು ಮುಖ್ಯ